# ನಂಜು

■ ವಸುಮತಿ ಉಡುಪ
ಕಲೆ: ಎಸ್.ವಿ. ಹೂಗಾರ



‘ನಾಲ್ಕು ದಿನ ಊರಿಗೆ ಹೋಗ್ಬರ್ತೀನಿ. ಅಪ್ಪ ಇಲ್ಲಿಗೆ ಬಂದ್ಮೇಲೆ ಊರ ಕಡೆ ತಲೆ ಹಾಕಿಲ್ಲ. ಮನೆ ಪರಿಸ್ಥಿತಿ ಏನಾಗಿದ್ಯೋ ನೋಡ್ಬೇಕು. ಎರಡು ದಿನ ಹೆಚ್ಚು ಕಮ್ಮಿ ಆದ್ರೆ ಪರ್ವಾಗಿಲ್ಲ ತಾನೇ?’

‘ಧಾರಾಳವಾಗಿ ಹೋಗ್ಬನ್ನಿ. ನಾನಿದೀನಲ್ಲ, ನೋಡ್ಕಂತೀನಿ...

‘ಅಪ್ಪನ್ನ ಎಲ್ಲಾದ್ರೂ ಹೊರಗೆ ಕಳಿಸ್ಬೇಡ. ಒಂದು ಹೋಗಿ ಮತ್ತೊಂದಾದ್ರೆ ನಾವೇ ಅನುಭವಿಸ್ಬೇಕಲ್ಲ?’

‘ಅಷ್ಟೂ ಗೊತ್ತಾಗಲ್ವಾ ನಂಗೆ?’

ಗಂಡ, ಹೆಂಡತಿಯ ನಡುವೆ ಹೀಗೊಂದು ಮಾತುಕತೆ ನಡೆದಿದ್ದು ಅಲ್ಲೇ ಬದಿಯ ಕೋಣೆಯಲ್ಲಿ ಮಲಗಿದ್ದ ಮೂರ್ತಿಗಳ ಕಿವಿಗೆ ಬಿದ್ದಿತ್ತು. ಅಥವಾ ಬೇಕೆಂದೇ ಮಗ ದನಿ ಏರಿಸಿ ಮಾತಾಡಿದ್ದಾ? ಇದೇ ಮಾತನ್ನು ತನ್ನ ಹತ್ತಿರ ಹೇಳಿದ್ದರೆ ಅವನ ದೊಡ್ಡಸ್ತಿಕೆಗೆ ಕುಂದು ಬರುತ್ತಿತ್ತಾ? ಊಹೂಂ. ದಿನಕ್ಕೆ ಒಂದು ಮಾತು ಆಡುವಷ್ಟು ಕನಿಷ್ಠ ಸೌಜನ್ಯ ಕೂಡಾ ಮಗ ತೋರಿಸುವುದಿಲ್ಲ. ಅವನಿಗೇ ಬಿಟ್ಟಿದ್ದರೆ ತನ್ನನ್ನು ಇಲ್ಲಿಗೆ ಕರೆಸಿಕೊಳ್ಳುತ್ತಿದ್ದ ಅನ್ನುವ ಮಾತು ಸುಳ್ಳು. ‘ರಾಧೆ ಹಟ ಮಾಡಿದಳು’ ಎನ್ನುವ ಬಗ್ಗೆ ಮೂರ್ತಿಗಳಿಗೆ ಅನುಮಾನ ಇಲ್ಲ. ದೇಹಕ್ಕೆ ವಯಸ್ಸಾದರೇನು? ಸ್ವಾಭಿಮಾನ ಅನ್ನುವುದು ಮುಕ್ಕಾಗುತ್ತದೆಯಾ? ಇದ್ದೇ ಇರುತ್ತದೆ. ಅದರಲ್ಲೂ ಪರಾವಲಂಬಿಗಳಾಗಿ ಬದುಕಿ ಅಭ್ಯಾಸವೇ ಇಲ್ಲ ಮೂರ್ತಿಗಳಿಗೆ. ಕಷ್ಟವೋ ಸುಖವೋ ತಮ್ಮ ಅನ್ನ ತಾವು ಉಂಡುಕೊಂಡು ನೆಮ್ಮದಿಯಿಂದಿದ್ದವರು. ಹೆಂಡತಿ ನಡುನೀರಲ್ಲಿ ಕೈ ಬಿಟ್ಟು ಹೋಗುವವರೆಗೆ ಈ ನೆಮ್ಮದಿಗೆ ಧಕ್ಕೆ ಬಂದಿರಲಿಲ್ಲ. ಹೊತ್ತುಹೊತ್ತಿಗೆ ರುಚಿರುಚಿಯಾಗಿ ಬೇಯಿಸಿ ಹಾಕುತ್ತಿದ್ದಳು ಹೆಂಡತಿ. ಇವರು ತೋಟ, ಗದ್ದೆ ಸುತ್ತಿಕೊಂಡು, ಹೊರಹೊರಗಿನ ಯಜಮಾನಿಕೆ ಮಾಡಿಕೊಂಡು ಸುಖಪುರುಷನ ಹಾಗೆ ಕಾಲ ಕಳೆಯುತ್ತಿದ್ದರು.

ಜವಾಬ್ದಾರಿಗಳೆಲ್ಲಾ ಮುಗಿದಿದ್ದುವು. ಮತ್ತೇನು? ಏಕೈಕ ಸುಪುತ್ರ ಮಧುಸೂದನನಿಗೆ ತನ್ನನ್ನು ಕಂಡರೆ ಅಷ್ಟಕ್ಕಷ್ಟೇ ಎನ್ನುವ ಸತ್ಯ ಆಗೀಗ ಕುಟುಕು ಮುಳ್ಳಾಡಿಸುತ್ತಿದ್ದರೂ ಸಹ್ಯವಾಗಿಸಿಕೊಳ್ಳುವುದನ್ನು ಅಭ್ಯಾಸಬಲದಿಂದ ರೂಢಿಸಿಕೊಂಡಿದ್ದರು. ಅಮ್ಮನಿಗೋಸ್ಕರವೇ ಬರಲಿ, ಹಬ್ಬ ಹರಿದಿನ ಅಂದರೆ ಮಗ ಊರಿಗೆ ಬರುತ್ತಿದ್ದ, ಮದುವೆಯಾದ ಮೇಲೆ ಹೆಂಡತಿಯೊಂದಿಗೆ, ಮಗು ಹುಟ್ಟಿದ ಮೇಲೆ ಮೊಮ್ಮಗನೊಂದಿಗೆ. ಗಿರಿಜಮ್ಮನ ಉತ್ಸಾಹ ಪರಾಕಾಷ್ಠೆಗೇರುತ್ತಿತ್ತು. ‘ಅದು ತನ್ನಿ, ಇದು ಬೇಕು’ ಎಂದು ದೊಡ್ಡ ಲಿಸ್ಟು ಸಿದ್ಧವಾಗಿ ಮೂರ್ತಿಗಳ ಕೈ ಸೇರುತ್ತಿತ್ತು. ವಾರಗಟ್ಟಲೆ ಮುಂಚಿನಿಂದ ತಿಂಡಿಗಳ ತಯಾರಿ. ಹುಳ್ಳಗಾಗುತ್ತಿತ್ತು ಮೂರ್ತಿಗಳ ಮನಸ್ಸು.

ಮಗ ತೀರಾ ಮಾತಾಡುವುದೇ ಇಲ್ಲ ಅಂತೇನಲ್ಲ. ಅಗತ್ಯಕ್ಕೆ ತಕ್ಕಷ್ಟು ಮುತ್ತು ಉದುರಿದಂತೆ ಮಾತಾಡುತ್ತಾನೆ. ‘ಬೆಕ್ಕಿನ ಬಿಡಾರ ಬೇರೆ’ ಅನ್ನುವ ಹಾಗೆ ಇವನ ಬಿಡಾರ ಅಡುಗೆಮನೆಯಲ್ಲಿ. ಅಮ್ಮನ ಹತ್ತಿರ ಎಲ್ಲಾ ಪುರಾಣ ಬಿಚ್ಚಿಕೊಳ್ಳುತ್ತದೆ. ಅವಳೂ ಸ್ಟಾಕ್ ಮಾಡಿಟ್ಟುಕೊಂಡಿರುವ ಊರ ಪುರಾಣವನ್ನೆಲ್ಲಾ ಮಗನ ಕಿವಿಗೆ ವರೆಯುತ್ತಾಳೆ. ‘ಏನು ತಿಂಡಿ ಮಾಡ್ಲೋ? ಏನು ಅಡುಗೆ ಮಾಡ್ಲೋ?’ ಎಂದು ಮಗನ ಹತ್ತಿರ ವಿಚಾರಿಸಿ ಅವನಿಗಿಷ್ಟವಾದದ್ದನ್ನ ಬಡಿಸುತ್ತಾಳೆ. ಸೊಸೆ ಬಂದ ಮೇಲೆ ಅವಳೂ ಅತ್ತೆಯ ಜೊತೆ ಹಾಲಿಗೆ ಸಕ್ಕರೆ ಬೆರೆತಂತೆ ಸೇರಿಕೊಂಡುಬಿಟ್ಟಳು. ಅಡುಗೆಮನೆಯಲ್ಲಿ ಎಲ್ಲಾ ಸಭೆ ಸೇರಿ ಕಲಕಲ ಮಾತು. ಕಿಲ ಕಿಲ ನಗು, ಹೊರಗೆ ಮುಂಚೇಕಡೆಯಲ್ಲಿ ಕೂತಿದ್ದ ಮೂರ್ತಿಗಳ ಕಿವಿದುಂಬಿದರೆ ಅವರಿಗೆ ಇರಿಸುಮುರಿಸಾಗುತ್ತಿತ್ತು.

‘ಬಾ ಅಪ್ಪಾ, ಒಬ್ನೇ ಕೂತ್ಗಂಡು ಅಲ್ಲೇನು ತಪಸ್ಸು ಮಾಡ್ತಿದೀಯಾ? ಬಾ ಇಲ್ಲೇ’ ಎಂದು ಮಗ ಕರೆದಿದ್ದರೆ ಜೀವನ ಪಾವನ ಎನಿಸಿಬಿಡುತ್ತಿತ್ತು ಮೂರ್ತಿಗಳಿಗೆ. ಆದರೆ ಅಂತಾ ಸಂದರ್ಭ ಯಾವತ್ತೂ ಬರಲಿಲ್ಲ. ಹೋಗಲಿ, ಕೈ ಹಿಡಿದ ಹೆಂಡತಿಯಾದರೂ ‘ಬನ್ರೀ ಇಲ್ಲೇ...’ ಎಂದು ಕರೆಯುವುದಕ್ಕೇನು? ಆದರೆ ಗೊತ್ತಿದೆ ಅವಳಿಗೆ, ತಾನು ಒಳಗೆ ಹೋದರೆ ಮಗ ಮುಗುಮ್ಮಾಗಿ ಬಿಡುತ್ತಾನೆ. ‘ಗಿರ್ಕೊಂಡು ಕೂರೋದು’ ಅನ್ನುವ ಹಾಗೆ ಅವನ ಬಾಯಿಪಟಾಕಿಗೆ ಬ್ರೇಕ್ ಬೀಳುತ್ತದೆ. ಅಪ್ಪನನ್ನು ದೂರ ಇಡುವುದನ್ನು ಮೊದಲಿನಿಂದ ಅಭ್ಯಾಸ ಮಾಡಿಕೊಂಡು ಬಂದಿದ್ದಾನಲ್ಲ, ಈಗ ಬಿಡು ಅಂದರೆ ಹೇಗೆ ಸಾಧ್ಯ? ಪಾಪದ ಹುಡುಗಿ ರಾಧೆ. ಅವಳಿಗೆ ಯಾವ ಒಳಗುಟ್ಟುಗಳೂ ಗೊತ್ತಿಲ್ಲ. ಹಾಗೆಂದುಕೊಂಡಿದ್ದಾರೆ ಮೂರ್ತಿಗಳು. ‘ಪಾಪ, ಮಾವ ಒಬ್ರೇ ಕೂತ್ಗಂಡಿದಾರೆ...’ ಎಂದು ಅವಳು ಹೇಳುವುದೇನಾದರೂ ಕಿವಿಗೆ ಬಿದ್ದರೆ ಉರಿವ ಗಾಯದ ಮೇಲೆ ತಣ್ಣೀರು ಬಿದ್ದಂತೆ ಹಿತವಾಗುತ್ತಿತ್ತು ಮೂರ್ತಿಗಳಿಗೆ.

ಅರ್ಧ ಕಾಫಿ ಕೊಡುವ ಹೆಳೆಯಿಂದಲಾದರೂ ಒಳಗಿಂದ ಕರೆ ಬರಬಹುದೆಂದು ಅವರು ನಿರೀಕ್ಷಿಸಿದರೆ ಹಾಗೇನಾಗುತ್ತಿರಲಿಲ್ಲ. ಮಗ ಬಂದ ಅಂದರೆ ಹೆಂಡತಿಗೆ ಕೊಂಬು ಬಂದು ಬಿಡುತ್ತದೆ ಎಂದು ಎಷ್ಟೋ ಸಲ ಮೂರ್ತಿಗಳಿಗೆ ಅನಿಸಿದ್ದಿದೆ, ಸಕಾರಣವಾಗಿ. ತಾನು ಅವರ ಮಧ್ಯ ಹೋಗಿ ಸೇರಿಕೊಂಡರೆ ಮಗ ನಿರಾಳವಾಗಿ ಹರಟೆ ಹೊಡೆಯುವುದಿಲ್ಲ ಎನ್ನುವ ಸತ್ಯ ಅವರಿಗೆ ಗೊತ್ತಿದೆ. ಹೆಣ್ಣುಮಕ್ಕಳು ಬಂದರೆ ಎಷ್ಟೋ ವಾಸಿ. ‘ಅಪ್ಪಾ... ಅಪ್ಪಾ...’ ಎಂದು ಮಾತಾಡಿಸಿಕೊಂಡು, ಕಷ್ಟ ಸುಖ ಹೇಳಿಕೊಂಡು ತಮ್ಮನ್ನು ಅವರಲ್ಲೊಬ್ಬನಂತೆ ಸರಾಗವಾಗಿ ಸೇರಿಸಿಕೊಂಡುಬಿಡುತ್ತಾರೆ. ಅವರಾದರೂ ಯಾವಾಗೆಂದರೆ ಆವಾಗ ಬರಲು